ಕರ್ನಾಟಕ ಸರ್ಕಾರ
## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ : 19–02–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಸ್ವಚ್ಛ ಭಾರತ್ ಮಿಷನ್ ಕುರಿತ ಕಾರ್ಯಾಗಾರ:<br><br>ಉದ್ಘಾಟನೆ:<br><br>ಶ್ರೀ ಎಂ. ವೆಂಕಯ್ಯನಾಯ್ಡು, ಕೇಂದ್ರ ನಗರಾಭಿವೃದ್ಧಿ ಸಚಿವರು<br><br>ಮುಖ್ಯ ಅತಿಥಿಗಳು:<br><br>ಶ್ರೀ ವಿನಯ್‌ಕುಮಾರ್ ಸೊರಕೆ ನಗರಾಭಿವೃದ್ಧಿ ಸಚಿವರು<br><br>ಶ್ರೀ ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು<br><br>ಡಾ: ಖಮರುಲ್ ಇಸ್ಲಾಂ, ಪೌರಾಡಳಿತ ಸಚಿವರು<br><br>ಸಂಪರ್ಕ:<br>ಶ್ರೀಮತಿ ಸ್ವರ್ಣ,<br>9986688982 | 20–2–2015<br>ಶುಕ್ರವಾರ<br>ಬೆಳಿಗ್ಗೆ<br>10–00 ಗಂಟೆಗೆ | ಹೋಟೆಲ್ ದಿ ಕ್ಯಾಪಿಟಲ್,<br>ರಾಜಭವನ ರಸ್ತೆ,<br>ಬೆಂಗಳೂರು–560 001 |

# ಪತ್ರಿಕಾ ಪ್ರಕಟಣೆ

# ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಹೆಚ್1 ಎನ್1 ಔಷಧಿ ಲಭ್ಯವಿರುವ ಔಷದ ಮಳಿಗೆಗಳು

**ಬೆಂಗಳೂರು, ಫೆ 19 (ಕರ್ನಾಟಕ ವಾರ್ತೆ):**

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಹೆಚ್1ಎನ್1 (ಹಂದಿ ಜ್ವರ) ಗೆ ಔಷಧಗಳಾದ Antiflu ಮತ್ತು Fluvir ಈ ಕೆಳಕಂಡ ಔಷಧ ಮಳಿಗೆಗಳಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಲಭ್ಯವಿರುತ್ತವೆ.

| Sl. No. | Name and Address of the Medical shops and Hospitals |
|---|---|
| 1. | Vikram Hospital, Millers Road, Bangalore-01 |
| 2. | Bhagawan Mahaveer Jain Hospital, Vasanthnagar, Bangalore-52 |
| 3. | M S Pharma, M S Ramaiah Hospital , New BEL Road, Bangalore-54 |
| 4. | Columbia Asia Hospital , Malleshwaram West, Bangalore-55 |
| 5. | Columbia Asia Hospital , Hebbal , Bangalore -24 |
| 6. | Mallige Hospital, Crescent road, Bangalore-01 |
| 7. | Manipal Hospital, HAL Road, Bangalore-17 |
| 8. | St. Philomenna's Hospital, Austin Town, Cambell Road, Bangalore -47 |
| 9. | St. John's Medical College Hospital , Sarjapur Road, Bangalore -34 |
| 10. | Chinmaya Mission Hospital Pharma, C M H Hospital ,Indiranagar, Bangalore -38 |
| 11. | Fortis Hospital , Bannerghatta Road, Bangalore -76 |
| 12. | Apollo Hospitals , Bannerghatta Road, Bangalore -76 |
| 13. | Sagar Pharma, Sagar Hospital , Kumaraswamy Layout, Bangalore -78 |
| 14. | Narayana Hrudayalaya Pvt. Ltd, Bommasandra, Hosur Road, Bangalore -99 |
| 15. | St. Marthas Hospital , Nrupathunga Road, Bangalore -01 |
| 16. | Bangalore Baptist Hospital, Bellary Road, Hebbal, Bangalore-24 |

| | |
|---|---|
| 17. | Maruthi Medicals, Vijayanagar, Bangalore -40 |
| 18. | Manjushree Medicals, Near Varalaxmi Nursing home, Rajajinagar 'D' Block, Bangalore -10 |
| 19. | S L N Pharma, Srinivasa Nursing Home, Hoskote |
| 20. | Patel Medicals, Near Bus Stand, Doddaballapur |
| 21. | Leena Medicals, Leena Multispecialty Hospital, Boodigere Road, Devanahalli |
| 22. | Sagar Pharma, Sagar Hospital ,Tilaknagar, Bangalore -41 |
| 23. | Prasad Medicals, Opp. Victoria Hospital , Bangalore -02 |
| 24. | Yasho Pharma, Residency Road, Bangalore -25 |
| 25. | Specialist Pharma, Kalyannagar, Bangalore -43 |
| 26. | Brooke Field Hospital, Marathalli, Bangalore -37 |
| 27. | Prakash Medicals, 80 Feet Road, Indiranagar, Bangalore-38 |
| 28. | Sri RadhaKrishna Pharma, Girinagar, Bangalore-85 |
| 29. | The Cash Pharmacy, St. Marks Road, Bangalore-01 |
| 30. | Ramakrishna Hospital Pharma, Jayanagar, Bangalore-11 |
| 31. | Sreedhar Medicals, Rajajinagar 3rd Block, Bangalore-10 |
| 32. | Sri Raghavendra Medicals and Gen. Stores, Rajajinagar 2nd Block, Bangalore-10 |
| 33. | Vishal medico and Cosmetics, R T Nagar, Bangalore-32 |
| 34. | Sudhir Medicals, Near Deepak Nursing Home, Bangalore-82 |
| 35. | Baptist Hospital Pharma, Hebbal, Bangalore-24 |
| 36. | Sakra World Hospital, Outer Ring Road, Bellandur, Bangalore-103 |
| 37. | Excel Care Hospital, Banashankari 2nd Stage, Bangalore-70 |
| 38. | Yashomathi Hospital, Marathalli, Bangalore-37 |
| 39. | Ananya Pharma, Ananya Hospital, Rajajinagar 1st Block, Bangalore-10 |
| 40. | Sri Krishna Sevashrama Hospital , Jayanagar, Bangalore-11 |
| 41. | Chord Road Drug House, Chord Road Hospital, Basaveshwaranagar, Bangalore-79 |
| 42. | HOSMAT Hospital, Magrath Road, Bangalore-25 |
| 43. | Residency Pharma, Residency Road, Bangalore-25 |

| | |
|---|---|
| 44. | Abhaya Pharma, Abhaya Hospital, Wilson Garden, Bangalore-27 |
| 45. | Sri Satya Sai Hospital, Whitefield, Bangalore-66 |
| 46. | Green View Pharma, Green View hospital, H S R Layout, Bangalore-102 |
| 47. | Green Apple, Mallya Hospital, Vittal Mallya Road, Bangalore-01 |
| 48. | Chetak Pharma, Residency Road, Bangalore-25 |
| 49. | Celebrate Health, Chamarajpet, Bangalore-18 |
| 50. | Fortis Hospital , Cunningham Road, Bangalore -52 |
| 51. | J S S Hospital, Bangalore-02 |

ಸಾರ್ವಜನಿಕರು ಸದರಿ ಔಷಧಗಳನ್ನು ಖರೀದಿಸಲು ವೈದ್ಯರ ಸಲಹಾ ಚೀಟಿಯನ್ನು ದ್ವಿಪ್ರತಿಯಲ್ಲಿ ಪಡೆದುಕೊಳ್ಳುವಂತೆ ಔಷಧ ನಿಯಂತ್ರಣ ಇಲಾಖೆ ಕೋರಿದೆ.

**ಪಹೊ/ಬಾಬು/ಕೆಎಂ**

## <u>ವೈಜ್ಞಾನಿಕ ಹಂದಿ ಸಾಕಾಣಿಕೆ</u>

**ಬೆಂಗಳೂರು, ಫೆ 19 (ಕರ್ನಾಟಕ ವಾರ್ತೆ):**

**ಹಂದಿ ಸಂವರ್ಧನಾ ಕೇಂದ್ರ, ಹೆಸರಘಟ್ಟ, ಬೆಂಗಳೂರು –89 ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ದಿನಾಂಕ 23–2–2015 ರಿಂದ 25–2–2015 ವರೆಗೆ 3 ದಿನಗಳ "ವೈಜ್ಞಾನಿಕ ಹಂದಿ ಸಾಕಾಣಿಕೆ" ಬಗ್ಗೆ ತರಬೇತಿಯನ್ನು ಏರ್ಪಡಿಸಲಾಗಿದ್ದು, ಇಚ್ಚಿಯುಳ್ಳವರು ತಮ್ಮ ಗುರುತಿನ ಚೀಟಿ ಹಾಗೂ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರಗಳೊಂದಿಗೆ ತರಬೇತಿಗೆ ಹಾಜರಾಗಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಮೊಬೈಲ್ ಸಂಖ್ಯೆಗಳು 080– 2846 6456, 9972743662.**
**ಪಹೊ/ಬಾಬು/ಕೆಎಂ**

## ರಾಜ್ಯ ಕೇಂದ್ರ ಗ್ರಂಥಾಲಯ ಶತಮಾನೋತ್ಸವ :
## ಗ್ರಂಥಾಲಯ ಸಂಸ್ಕೃತಿ ಪುನರುಜ್ಜೀವನಕ್ಕೆ ಸರ್ಕಾರದ ಕ್ರಮ

–ಸಚಿವ ಶ್ರೀ ಕಿಮ್ಮನೆ ರತ್ನಾಕರ್

**ಬೆಂಗಳೂರು, ಫೆ 19 (ಕರ್ನಾಟಕ ವಾರ್ತೆ):**

ಬೆಂಗಳೂರು ನಗರದ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ (ಶೇಷಾದ್ರಿ ಅಯ್ಯರ್ ಸ್ಮಾರಕ ಭವನ ) ನೂರು ವರ್ಷ ತುಂಬಿದ್ದು, ಬರುವ ಮೇ ತಿಂಗಳ ಕೊನೆಯ ವಾರದಲ್ಲಿ ಶತಮಾನೋತ್ಸವ ಆಚರಿಸಲು ಸರ್ಕಾರ

ನಿರ್ಧರಿಸಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಗ್ರಂಥಾಲಯ ಸಚಿವ ಶ್ರೀ ಕಿಮ್ಮನೆ ರತ್ನಾಕರ್ ಅವರು ತಿಳಿಸಿದ್ದಾರೆ.

ರಾಜ್ಯ ಗ್ರಂಥಾಲಯ ಶತಮಾನೋತ್ಸವ ಆಚರಣೆ ಹಿನ್ನೆಲೆಯಲ್ಲಿ ಇಂದು ಸಾಹಿತಿಗಳು, ಚಿಂತಕರು ಮತ್ತು ಗ್ರಂಥಪಾಲಕರ ಜೊತೆ ಪೂರ್ವಬಾವಿ ಸಭೆ ನಡೆಸಿದ ಸಚಿವರು ಶತಮಾನೋತ್ಸವದ ಆಚರಣೆ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಜನರಲ್ಲಿ ವಿಶೇಷವಾಗಿ ಯುವ ಜನರಲ್ಲಿ ಓದುವ ಹವ್ಯಾಸ ಹೆಚ್ಚಿಸಲು ಪೂರಕವಾಗಿ ಗ್ರಂಥಾಲಯ ಸಂಸ್ಕೃತಿ ಪುನರುಜ್ಜೀವನಕ್ಕೆ ನೆರವಾಗಬಲ್ಲ ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗುವುದೆಂದು ತಿಳಿಸಿದರು.

ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೇರಣೆಯಿಂದ ಅಂದಿನ ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ 1915 ರಲ್ಲಿ ಪೂರ್ಣಗೊಂಡ ಪಾರಂಪರಿಕ ಕೇಂದ್ರ ಗ್ರಂಥಾಲಯದ ಕಟ್ಟಡವನ್ನು ಮತ್ತೊಬ್ಬ ದಿವಾನ್ ಸರ್.ಶೇಷಾದ್ರಿ ಅಯ್ಯರ್ ಅವರ ಸ್ಮಾರಕವಾಗಿ ನಾಮಕರಣ ಮಾಡಲಾಗಿದೆ. ಶತಮಾನೋತ್ಸವದ ಅಂಗವಾಗಿ ಬೆಂಗಳೂರು ನಗರವಲ್ಲದೆ ಜಿಲ್ಲಾ ಕೇಂದ್ರಗಳಲ್ಲಿ ಕೂಡ ವಿಚಾರ ಸಂಕಿರಣ ಮತ್ತು ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸಲಾಗುವುದು.

ಈ ಸಂದರ್ಭದಲ್ಲಿ ಹೊರತರುತ್ತಿರುವ ಸ್ಮರಣ ಸಂಚಿಕೆಯು ಗ್ರಂಥಾಲಯ ಚಳುವಳಿ ಹಾಗೂ ವಾಚನ ಸಂಸ್ಕೃತಿ ಬಿಂಬಿಸುವ ಲೇಖನಗಳಲ್ಲದೆ ಕಳೆದ ಒಂದು ಶತಮಾನದಲ್ಲಿ ರಾಜ್ಯದಲ್ಲಿ ಘಟಿಸಿರುವ ಶೈಕ್ಷಣಿಕ, ಆರ್ಥಿಕ,ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳನ್ನು ದಾಖಲಿಸುವ ಗಂಭೀರ ಆಕರ ಗ್ರಂಥದ ರೂಪದಲ್ಲಿರುತ್ತದೆ ಎಂದು ತಿಳಿಸಿದ ಸಚಿವರು ಸ್ಮರಣ ಸಂಚಿಕೆಗೆ ಮೌಲಿಕ ಲೇಖನಗಳನ್ನು ನೀಡುವಂತೆ ಸಾಹಿತಿ ಹಾಗೂ ವಿವಿಧ ಕ್ಷೇತ್ರಗಳ ಪರಿಣಿತರನ್ನು ಆಹ್ವಾನಿಸಿದ್ದಾರೆ.

ರಾಜ್ಯದಲ್ಲಿ ಸಂಗ್ರಹಿಸುತ್ತಿರುವ ಗ್ರಂಥಾಲಯ ಸೆಸ್‌ನ ಮೊತ್ತವನ್ನು ನೇರವಾಗಿ ಗ್ರಂಥಾಲಯ ಇಲಾಖೆ ಲೆಕ್ಕಶೀರ್ಷಿಕೆಯಡಿ ಸಂದಾಯ ಮಾಡುವಂತೆ ಕರ್ನಾಟಕ ಗ್ರಂಥಾಲಯ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆಯೂ ಸರ್ಕಾರ ಆಲೋಚಿಸುತ್ತಿದೆ ಎಂದು ಸಚಿವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ. ಇಂದು ನಡೆದ ಸಭೆಯಲ್ಲಿ ಸಾಹಿತಿ ಹಾಗೂ ಚಿಂತಕರಾದ ಎಸ್.ಜಿ.ಸಿದ್ದರಾಮಯ್ಯ, ಶ್ರೀಮತಿ ಬಿ.ಟಿ. ಲಲಿತಾ ನಾಯಕ್, ಶೂದ್ರ ಶ್ರೀನಿವಾಸ್, ರವೀಂದ್ರ ರೇಷ್ಮೆ, ನಾಗತಿಹಳ್ಳಿ ಚಂದ್ರಶೇಖರ್, ಪ್ರೊ: ವಸಂತಕುಷ್ಟಗಿ, ಸುರೇಶ್ ಕುಲಕರ್ಣಿ ಮೊದಲಾದವರು ಭಾಗವಹಿಸಿದ್ದರು.

ಎನ್‌ಬಿ/ಪಹೊ/ಬಾಬು/ಕೆಎಂ/ಜಿಎಲ್

**<u>ವಾರ್ತಾ ವಿಶೇಷ:</u>**

# ಕೃಷಿ ಇಲಾಖೆಯಡಿ ವಿವಿಧ ಯೋಜನೆಗಳು

**ರಾಜ್ಯದಲ್ಲಿ ಕೃಷಿಯನ್ನು ಉತ್ತೇಜಿಸಲು ಸರ್ಕಾರವು ಕೃಷಿ ಭಾಗ್ಯ, ಭೂಚೇತನ, ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆ, ಕೆ–ಕಿಸಾನ್, ಸಾವಯವ ಕೃಷಿ, ರಾಗಿ ಮತ್ತು ಜೋಳದ ಉತ್ಪಾದನೆ ಹೆಚ್ಚಿಸಲು ವಿಶೇಷ ಪ್ರೋತ್ಸಾಹ ಹಾಗೂ ಮಣ್ಣು ಆರೋಗ್ಯ ಅಭಿಯಾನ ಈ ಮುಂತಾದ ಪ್ರಮುಖ ಕಾರ್ಯಕ್ರಮ (Flagship Programme) ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.**

## ಕೃಷಿ ಭಾಗ್ಯ:

ಮಳೆ ಆಶ್ರಿತ ರೈತರನ್ನು ಕೇಂದ್ರೀಕರಿಸಿ ಮಳೆ ನೀರು ಸಂಗ್ರಹಣೆ ಮತ್ತು ಪುನರ್ ಬಳಕೆಗೆ ಆದ್ಯತೆ ನೀಡಿ ಕೃಷಿ ಭಾಗ್ಯ ಯೋಜನೆಯನ್ನು ಮೊದಲನೆ ಹಂತದಲ್ಲಿ 5 ಮುಖ್ಯ ಒಣ ಭೂಮಿ ವಲಯಗಳ ರಾಜ್ಯದ 23 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ಜಾರಿಗೆ ತರಲಾಗಿದೆ. ಮಳೆ ನೀರಿನ ಸಂರಕ್ಷಣೆ, ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ, ಲಾಭದಾಯಕ ಬೆಳೆ ಪದ್ಧತಿಗಳ ಅಳವಡಿಕೆ, ಉತ್ತಮ ಆದಾಯ ತರುವ ತೋಟಗಾರಿಕೆ ಬೆಳೆಗಳು, ಪಶುಸಂಗೋಪನಾ ಚಟುವಟಿಕೆಗಳು, ಪಾಲಿ ಹಾಸ್ ಬೇಸಾಯಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಕೃಷಿಯಲ್ಲಿ ಸುಸ್ಥಿರ ಅಭಿವೃದ್ಧಿಯ ಆಶಯ ಹೊಂದಲಾಗಿದೆ. 'ಕೃಷಿ ಭಾಗ್ಯ' ಅನುಷ್ಠಾನವನ್ನು ಮಿಷನ್ ಮೋಡ್ ಮಾದರಿಯಲ್ಲಿ ಹಂತ ಹಂತವಾಗಿ ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಈ ಯೋಜನೆಗಾಗಿ 2014-15 ನೇ ಸಾಲಿನ ಆಯವ್ಯಯದಲ್ಲಿ ರೂ 500 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಪ್ರತಿ ತಾಲ್ಲೂಕಿಗೆ 210 ಫಲಾನುಭವಿಗಳಿಗೆ ಅವಕಾಶವಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಪಾಲಿಹೌಸ್ ಸಹಿತ ಮಾದರಿಗೆ 1084 ಫಲಾನುಭವಿಗಳಿಗೆ ಹಾಗೂ ಪಾಲಿಹೌಸ್ ರಹಿತ ಮಾದರಿಗೆ 21217 ಫಲಾನುಭವಿಗಳಿಗೆ ಗುರಿಯನ್ನು ನಿಗದಿಪಡಿಸಲಾಗಿದೆ.

## ಭೂಚೇತನ:

ಭೂಚೇತನ ಯೋಜನೆಯನ್ನು 2009-10 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಇದರ ಫಲಿತಾಂಶದಿಂದ ಪ್ರೇರಿತವಾಗಿ ಈ ಯೋಜನೆಯನ್ನು ಬಲಪಡಿಸಿ ಮುಂದುವರೆಸಲು ಎರಡನೆಯ ಹಂತದ 2013-17 ಸಾಲಿನ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. International Crops Research Institute for the Semi-Arid Tropics (ICRISAT) ಸಂಸ್ಥೆ ಹೈದರಾಬಾದ್ ಇವರು ಯೋಜನೆಯ ತಾಂತ್ರಿಕ ಸಲಹೆಗಾರರಾಗಿರುತ್ತಾರೆ. ಭೂಚೇತನ ಯೋಜನೆಯ ಎರಡನೆ ಹಂತರದಲ್ಲಿ ಐದು ವರ್ಷಗಳಲ್ಲಿ ಈಗಾಗಲೇ ಇರುವ ಕೃಷಿ ಉತ್ಪಾದನೆಯನ್ನು ಶೇ. 20 ರಷ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ.

ಖುಷ್ಕಿ ತಾಂತ್ರಿಕತೆಗಳಿಗೆ ಪೂರಕವಾಗಿ ಬೇಕಾಗುವ ಲಘು ಪೋಷಕಾಂಶ, ಜಿಪ್ಸಂ, ಜೈವಿಕಗೊಬ್ಬರ ಮುಂತಾದ ಪರಿಕರಗಳನ್ನು ರೈತರಿಗೆ ಶೇ. 50 ರ ರಿಯಾಯಿತಿ ದರದಲ್ಲಿ ಗುಚ್ಛ ಗ್ರಾಮ ಮಟ್ಟದಲ್ಲಿ ವಿತರಿಸಲಾಗುತ್ತಿದೆ.

ಈ ಯೋಜನೆಯಡಿ ಒಟ್ಟು 58 ಲಕ್ಷ ಹೆ. (ಖುಷ್ಕಿ-50.0 ಲಕ್ಷ ಹೆ. ಭತ್ತ-6.0 ಲಕ್ಷ ಹೆ. ಮತ್ತು ಕಬ್ಬು – 2.0 ಲಕ್ಷ ಹೆ) ಪ್ರದೇಶದಲ್ಲಿ ಬಿತ್ತನೆ ಕಾರ್ಯಕ್ರಮವನ್ನು ರೂಪಿಸಲಾಗಿದ್ದು ಇಲ್ಲಿಯವರೆಗೆ (ಮುಂಗಾರು ಹಂಗಾಮು – 50.26 ಲಕ್ಷ ಹೆ, ಹಿಂಗಾರು ಹಂಗಾಮು – 18.32 ಲಕ್ಷ ಹೆ. ಒಟ್ಟು 68.58 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.

9322 ರೈತ ಅನುವುಗಾರರ ಸೇವೆಯನ್ನು ಬಳಸಿಕೊಂಡು ಗುಚ್ಛ ಗ್ರಾಮ ಮಟ್ಟದಲ್ಲಿ 1,13,214 ಟನ್ ಜಿಪ್ಸಂ 12734 ಟನ್ ಝಿಂಕ್ ಹಾಗೂ 3955 ಟನ್ ಬೋರಾನ್ 4430 ಗುಚ್ಛ ಗೋಡೌನ್‌ಗಳಲ್ಲಿ ವಿತರಿಸಲಾಗಿದೆ.

8796 ರೈತ ಕ್ಷೇತ್ರ ಪಾಠಶಾಲೆಗಳನ್ನು ಒಳಗೊಂಡಂತೆ ವ್ಯಾಪಕ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ರೈತರ ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಗೆ ವಿವಿಧ ಹಂತಗಳಲ್ಲಿ ತರಬೇತಿಗಳನ್ನು ನಡೆಸಲಾಗುತ್ತಿದ್ದು, ಜಿಲ್ಲಾ, ತಾಲ್ಲೂಕು, ಹೋಬಳಿ ಹಾಗೂ ಗುಚ್ಛ ಗ್ರಾಮ ಮಟ್ಟದಲ್ಲಿ ಒಟ್ಟು 7217 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಒಟ್ಟು 7980 ರೈತ ಅನುವುಗಾರರಿಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಐದು ದಿನಗಳ ಸಾಂಸ್ಥಿಕ ತರಬೇತಿಗಳನ್ನು ನೀಡಲಾಗಿದೆ.

## ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆ:

ಕೃಷಿ ಚಟುವಟಿಕೆಗಳನ್ನು ಸಕಾಲದಲ್ಲಿ ಕೈಗೊಳ್ಳಲು, ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ತೆರೆದು ರೈತರಿಗೆ ಸಕಾಲದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಸಲುವಾಗಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ನೋಂದಾಯಿತ ಚಾರಿಟಬಲ್ ಟ್ರಸ್ಟ್‌ಗಳು/ಸಂಘ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸ್ಥಾಪನೆ ಮಾಡಲಾಗುತ್ತಿದೆ. ಸಣ್ಣ ಮತು ಅತಿಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಸಲುವಾಗಿ 2014-15 ನೇ ಸಾಲಿನಲ್ಲಿ 183 ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ನೊಂದಾಯಿತ ಚಾರಿಟಬಲ್ ಟ್ರಸ್ಟಗಳ ಮುಖಾಂತರ ಸ್ಥಾಪಿಸಲಾಗಿದೆ.

## ಕರ್ನಾಟಕ ಕೃಷಿ ಮಾಹಿತಿ ಪದ್ಧತಿ (ಕೆ-ಕಿಸಾನ್)

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (JCT) ಅಳವಡಿಕೆ ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವಲ್ಲಿ ಪ್ರಮುಖ ಮೂಲ ಸೌಕರ್ಯಗಳಲ್ಲೊಂದಾಗಿದ್ದು, ಕೇಂದ್ರದ ಕಚೇರಿಯಿಂದ ರೈತ ಸಂಪರ್ಕ ಕೇಂದ್ರ ಮಟ್ಟದವರೆಗೆ ಅಂತರ್ಜಾಲದ ಮೂಲಕ ಮಾಹಿತಿಯನ್ನು ಪರಿಣಾಮಕಾರಿಯಾಗಿ ಹಾಗೂ ಪಾರದರ್ಶಕವಾಗಿ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ. ಇಲಾಖೆಯು ನೀಡುತ್ತಿರುವ ಸೇವೆಗಳಾದ ಮಣ್ಣು ಮಾದರಿ ಸಂಗ್ರಹಣೆ, ಪರಿಕರ ವಿತರಣೆ (ಬೀಜ, ಜೈವಿಕ ಗೊಬ್ಬರ, ಕೀಟನಾಶಕಗಳು ಇತ್ಯಾದಿ) ಕೃಷಿ ಯಾಂತ್ರೀಕರಣ, ಲಘು ನೀರಾವರಿ, ಪರವಾನಗಿ ಉತ್ಪಾದನೆ, ಮಾರುಕಟ್ಟೆ ತಂತ್ರಜ್ಞಾನ ಮಾಹಿತಿಗಳು, MIS ವರದಿಗಳು ಇ-ಆಡಳಿತದಲ್ಲಿ ತರುವ ಮೂಲಕ ಪಾರದರ್ಶಕತೆಯನ್ನು ಹೆಚ್ಚಿಸುವುದು ಮೂಲ ಉದ್ದೇಶವಾಗಿದೆ.

## ಸಾವಯವ ಕೃಷಿ:

ಕೃಷಿ ಇಲಾಖೆಯು ರಾಜ್ಯದ ಎಲ್ಲಾ ತಾಲ್ಲೂಕುಗಳನ್ನು ಒಟ್ಟು 100 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಗ್ರಾಮ ಕಾರ್ಯಕ್ರಮವನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹಮ್ಮಿಕೊಂಡಿರುತ್ತದೆ. ಬೆಳೆ ಉತ್ಪಾದನೆಗೆ ಹೆಚ್ಚಿನ ಸಾವಯವ ಗೊಬ್ಬರವನ್ನು ಬಳಸುವ ನಿಟ್ಟಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ತಯಾರಿಸಿ, ವಿತರಣೆ ಮಾಡುವ ಅವಶ್ಯಕತೆ ಇದೆ. ಸಾವಯವ ಕೃಷಿ ಗ್ರಾಮ ಯೋಜನೆಯನ್ನು 100 ಹೆಕ್ಟೇರ್ ಪ್ರದೇಶದಲ್ಲಿ ಹೋಬಳಿ ಮಟ್ಟಕ್ಕೆ ವಿಸ್ತರಿಸಲು ಯೋಜಿಸಲಾಗಿದ್ದು, ಸಾವಯವ ಕೃಷಿಗೆ ಉತ್ತೇಜನ, ಸಾವಯವ ಗೊಬ್ಬರಗಳ ತಯಾರಿಕೆ ಮತ್ತು ವಿತರಣೆಗೆ ಉತ್ತೇಜನ, ಆ ಪ್ರದೇಶಗಳಲ್ಲಿ ಬೆಳೆಯುವ ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಒದಗಿಸುವ ಕಾರ್ಯವನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ. 2014-15 ನೇ ಸಾಲಿನ ರಾಜ್ಯವಲಯ ಸಾವಯವ ಕೃಷಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒಟ್ಟು ರೂ 900.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, "ಸಾವಯವ ಭಾಗ್ಯ ಯೋಜನೆ' ಯನ್ನು 566 ಹೋಬಳಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸುಮಾರು 63677 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಕೃಷಿಯನ್ನು ಅಳವಡಿಸಲಾಗಿದ್ದು, 53829 ರೈತರು ಇದರ ಪ್ರಯೋಜನ ಪಡೆದಿರುತ್ತಾರೆ.

## ರಾಗಿ ಮತ್ತು ಜೋಳದ ಉತ್ಪಾದನೆ ಹೆಚ್ಚಿಸಲು ವಿಶೇಷ ಪ್ರೋತ್ಸಾಹ:

ರಾಗಿ ಮತ್ತು ಜೋಳ ರಾಜ್ಯದ ಪ್ರಮುಖ ಪೌಷ್ಠಿಕಯುಕ್ತ ಆಹಾರ ಧಾನ್ಯ ಬೆಳೆಗಳಾಗಿದ್ದು, ಈ ಬೆಳೆಗಳ ಉತ್ಪಾದಕತೆ ಹೆಚ್ಚಿಸಲು ನೂತನ ತಾಂತ್ರಿಕತೆಗಳ ಅಳವಡಿಕೆಗೆ ವಿಶೇಷ ಪ್ಯಾಕೇಜ್ ಅನ್ನು ನೀಡಲಾಗುವುದು.

ಇದರಲ್ಲಿ ಸುಧಾರಿತ ತಳಿಗಳ ಕಿರುಚೀಲ ವಿತರಣೆ, ಸಮಗ್ರ ತಾಂತ್ರಿಕತೆಗಳ ಅಳವಡಿಕೆ, ಸುಧಾರಿತ ಯಂತ್ರೋಪಕರಣಗಳ ಬಳಕೆ, ಬೀಜೋತ್ಪಾದನೆ ಮತ್ತು ಸಂಸ್ಕರಣೆಗೆ ಪ್ರೋತ್ಸಾಹವನ್ನು ನೀಡಲಾಗುವುದು. ಈ ವಿಶೇಷ ಕಾರ್ಯಕ್ರಮವನ್ನು ಒಟ್ಟು ರೂ 15.00 ಕೋಟಿಗಳ ಅನುದಾನದಲ್ಲಿ ರೂಪಿಸಿದ್ದು, ಈ ಯೋಜನೆಯನ್ನು ರಾಗಿ ಬೆಳೆಯುವ 13 ಜಿಲ್ಲೆಗಳಲ್ಲಿ ಮತ್ತು ಜೋಳ ಬೆಳೆಯುವ 12 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## ಮಣ್ಣು ಆರೋಗ್ಯ ಅಭಿಯಾನ:

ಮಣ್ಣು ಆರೋಗ್ಯ ಅಭಿಯಾನದಡಿ ರಾಜ್ಯದ ಎಲ್ಲಾ ರೈತ ಹಿಡುವಳಿದಾರರಿಗೆ ಮಣ್ಣು ಮಾದರಿಗಳನ್ನು ಸಂಗ್ರಹಿಸಿ, ಪ್ರಧಾನ ಹಾಗೂ ಲಘು ಪೋಷಕಾಂಶಗಳಿಗೆ ವಿಶ್ಲೇಷಣೆ ಮಾಡಿ ಮಣ್ಣು ಫಲವತ್ತತೆ ವಿವರ ಹಾಗೂ ಬೆಳೆಗಳಿಗೆ ಅನುಗುಣವಾಗಿ ಪೋಷಕಾಂಶಗಳ ಬಳಕೆ ಬಗ್ಗೆ ಶಿಫಾರಸ್ಸುಗಳನ್ನೊಳಗೊಂಡ ವಿವರಗಳನ್ನು ಕೆ–ಕಿಸಾನ್ ಪ್ರಾಯೋಜನೆಯ ರೈತರ ಪಾಸ್ ಬುಕ್‌ನಲ್ಲಿ ಅಳವಡಿಸಿ ರೈತರಿಗೆ ವಿತರಿಸಲಾಗುವುದು.

## ಜಲಾನಯನ ಅಭಿವೃದ್ಧಿ ಇಲಾಖೆ:

ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕೃಷಿಯನ್ನು ಉತ್ತೇಜಿಸಲು ಮಣ್ಣು ಮತ್ತು ನೀರು ಸಂರಕ್ಷಣೆ ಮಾಡುವ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ಇಲಾಖೆ ಅನುಷ್ಠಾನಗೊಳಿಸುತ್ತಿದೆ. ಮುಖ್ಯವಾಗಿ ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಜಲಾನಯನ ನಿರ್ವಹಣೆ ಯೋಜನೆ ಮತ್ತು ವಿಶ್ವಬ್ಯಾಂಕ್ ನೆರವಿನ ಸುಜಲಾ–3 ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳಡಿಯಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ಯೋಜನಾ ಪ್ರದೇಶದ ಜಮೀನುಗಳಲ್ಲಿ ಕ್ಷೇತ್ರ ಬದುಗಳು, ಕಂದಕ ಬದುಗಳು, ಬೋಲ್ಡರ್/ರಬಲ್/ಸಸ್ಯ ತಡೆಗಳು, ಕೃಷಿ ಹೊಂಡಗಳು, ಚಿಕ್ಕ ತಡೆ ಅಣೆಗಳು, ನಾಲಾ ಬದುಗಳು, ಖುಷ್ಕಿ ತೋಟಗಾರಿಕೆ, ಕೃಷಿ ಅರಣ್ಯ ಮತ್ತು ಮೇವು ಅಭಿವೃದ್ಧಿ ಮುಂತಾದ ಚಟುವಟಿಕೆಗಳನ್ನು ತಾಂತ್ರಿಕತೆ ಆಧರಿಸಿ ಅನುಷ್ಠಾನ ಮಾಡಲಾಗುತ್ತಿದೆ. ಈ ಚಟುವಟಿಕೆಗಳಿಂದ ಪರಿಣಾಮಕಾರಿಯಾಗಿ ಮಣ್ಣು ಮತ್ತು ನೀರು ಸಂರಕ್ಷಣೆಯಾಗುತ್ತದೆ, ಅಲ್ಲದೆ ರೈತರ ಆದಾಯ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ.

ಈ ಯೋಜನೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಸಲುವಾಗಿ ಜಲಾನಯನ ಅಭಿವೃದ್ಧಿ ಇಲಾಖೆಯು ಸರ್ಕಾರೇತರ ಸಂಸ್ಥೆಗಳನ್ನು ಬಳಕೆ ಮಾಡಿಕೊಂಡು ಅವರ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ ಕೈಗೊಳ್ಳುತ್ತಿದೆ. ಸರ್ಕಾರೇತರ ಸಂಸ್ಥೆಯ ಸಿಬ್ಬಂದಿ ಯೋಜನಾ ಪ್ರದೇಶದ ಗ್ರಾಮಗಳಲ್ಲಿ ಗ್ರಾಮಸಭೆಗಳು, ಜಾಥಾಗಳು, ಬೀದಿ ನಾಟಕಗಳು, ಕುಟುಂಬ ಸಮೀಕ್ಷೆ, ಗೋಡೆಬರಹ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಜನರಿಗೆ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮುಖಾಂತರ ಕೃಷಿಯನ್ನು ಉತ್ತೇಜಿಸಲಾಗುತ್ತಿದೆ.

ಬಾಬು:ಜೆಪಿಆರ್